

ಬಾಣಸುರ ಸಾಗರ

ದಕ್ಷಿಣ ಭಾರತದಲ್ಲಿ ಶಿಲಾಯುಗದ ಕೆತ್ತನೆಗಳಿರುವ ಒಂದೇ ಒಂದು ಸ್ಥಳವೆಂದರೆ ಈ ಎಡಕಲ್ಲು ಗುಹೆಗಳು. 1890 ರಲ್ಲಿ ಮಲಬಾರ್ ರಾಜ್ಯದ ಪೋಲೀಸ್ ಫ್ರೆಡ್ ಫಾಸೆಟ್ ಎಂಬುವರು ಮೊದಲು ಈ ಗುಹೆಗಳನ್ನು ನೋಡಿ ಅದರ ಚಾರಿತ್ರಿಕ ಮಹತ್ವದ ಬಗ್ಗೆ ಒಂದು ಲೇಖನವನ್ನು ಬರೆದರು. ಈ ಲೇಖನವು ಅನೇಕ ಪುರಾತತ್ವ ತಜ್ಞರನ್ನು ಆಕರ್ಷಿಸಿ ಅವರೆಲ್ಲ ಈ ಗುಹೆಗಳ ಬಗೆಗೆ ಹೆಚ್ಚಿನ ಅಧ್ಯಯನ ಮಾಡಿದರು.

ಈ ಗುಹೆಗಳು ಕೇರಳದ ವೈನಾಡ್ ಜಿಲ್ಲೆಯಲ್ಲಿರುವ ಕಲ್ಪೆಟ್ಟಾದಿಂದ 25 ಕಿ.ಮೀ ದೂರದಲ್ಲಿದೆ. ಅಂಬುಕುಟ್ಟಿ ಮಾಲಾ ಎಂಬ ಬೆಟ್ಟದ ಮೇಲ್ಭಾಗದಲ್ಲಿ ಈ ಗುಹೆಗಳಿವೆ.

ಬೆಟ್ಟದ ತಳಭಾಗದವರೆಗೂ ವಾಹನದಲ್ಲಿ ತೆರಳಬಹುದು. ಬೆಟ್ಟದ ಬುಡದಿಂದ ಸುಮಾರು 45 ನಿಮಿಷಗಳ ನಡಿಗೆಯ ಮೂಲಕ ಗುಹೆಯನ್ನು ತಲುಪಬಹುದು. ಕಾಲ್ನಡಿಗೆಯ ಪ್ರಯಾಸ ತಿಳಿಯದಂತೆ ದಾರಿಯುದ್ದಕ್ಕೂ ತಿನಿಸುಗಳು ಸಿಗುತ್ತವೆ. ದಾರಿಯಲ್ಲಿ ಸಿಗುವ ಸೌತೆಕಾಯಿ, ವಿನೆಗರ್‌ನಲ್ಲಿ ಹಾಕಿಟ್ಟ ನೆಲ್ಲಿಕಾಯಿ, ಮಾವಿನಕಾಯಿ, ಎಳನೀರು ಮತ್ತು ಬಿದರಕ್ಕಿಯ ಪಾಯಸದ ಜೊತೆಗೆ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ನಡೆದರೆ ಟ್ರೆಕ್ಕಿಂಗ್ ಉತ್ಸಾಹ ಇಮ್ಮಡಿಯಾಗಬಹುದು.

ಬೆಳಿಗ್ಗೆ 9.30 ರಿಂದ ಸಂಜೆ 4.30 ರವರೆಗೂ ಈ ಗುಹೆಯನ್ನು ಸಂದರ್ಶಿಸಬಹುದು. ಪ್ರವೇಶಧನ ತುಂಬ ಕಮ್ಮಿ. ಗುಹೆಯನ್ನು ತಲುಪಲು ಕಡಿದಾದ ದಾರಿಯ ಜೊತೆಗೆ ಉಕ್ಕಿನಿಂದ ನಿರ್ಮಿತವಾದ ಮೆಟ್ಟಿಲುಗಳೂ ಇವೆ. ಹತ್ತಿ ಇಳಿಯಲು ಹೆಚ್ಚು ಕಷ್ಟವಾಗುವುದಿಲ್ಲ. ಬೃಹದಾಕಾರದ ಬಂಡೆಯು ಛಿದ್ರಗೊಂಡು ಉಂಟಾದ ಪ್ರಾಕೃತಿಕ ಗುಹೆಗಳಿವು. ಎರಡೂ ಕಲ್ಲಿನ ಗುಹೆಗಳು ಒಂದರ ಮೇಲೊಂದು ನಿಂತಿವೆ. ಕೆಳಭಾಗದ ಗುಹೆಯಲ್ಲಿ ಕೆತ್ತನೆಗಳಿಲ್ಲ.

ಮೇಲ್ಭಾಗದ ಗುಹೆಯು 96 ಅಡಿ ಉದ್ದ, 22 ಅಡಿ ಅಗಲ ಮತ್ತು 18 ಅಡಿ ಎತ್ತರವಾಗಿದೆ. ಈ ತುಂಡಾದ ಕಲ್ಲುಗಳ ಭಾರ ಹಲವು ಟನ್ನುಗಳಷ್ಟು ಇರಬಹುದು. ಕಲ್ಲಿನ ಮೇಲೆ ಕೆತ್ತಿರುವ ಮನುಷ್ಯ ಮತ್ತು ಪ್ರಾಣಿಯ ಚಿತ್ರಗಳು ಸಿಂಧೂ ನಾಗರಿಕತೆಯ ಕಾಲದ್ದು ಎನ್ನುವವರೂ ಇದ್ದಾರೆ. ಈ ಗುಹೆಗಳ ಬಗ್ಗೆ ಹಲವಾರು ದಂತಕಥೆಗಳೇ ಇವೆ. 2007ರಲ್ಲಿ ಈ ಗುಹೆಗಳನ್ನು ಯುನೆಸ್ಕೋ ಸಂಸ್ಥೆಯು ವಿಶ್ವ ಪಾರಂಪರಿಕ ಕೇಂದ್ರ ಎಂದು ಪ್ರಕಟಿಸಿದೆ. ಈ ಬೆಟ್ಟದ ಮೇಲ್ಭಾಗದಲ್ಲಿ ನಿಂತು ನೋಡಿದರೆ ಕೇರಳ, ಕರ್ನಾಟಕ ಹಾಗೂ ತಮಿಳುನಾಡಿಗೆ ಸೇರಿದ ರಮಣೀಯ ಬೆಟ್ಟಗಳ ಸಾಲುಗಳು ಕಣ್ಣಿಗೆ ಮುದ